ಮಠದ ಹಿಂದಿನ ಸ್ವಾಮಿಗಳು ಆ ಕಾಲದಲ್ಲಿ ಇವರ ಮನೆಯಲ್ಲೇ 8–10 ದಿನಗಳ ಮೊಕ್ಕಾಂ ಹೂಡುತ್ತಿದ್ದರು. ಐದಾರು ಎಕರೆ ಅಡಿಕೆ ತೋಟವಿದ್ದು ಎಲ್ಲ ಸಮೃದ್ಧಿಯೇನೋ ಇದೆ. ನವರಾತ್ರಿ ಉತ್ಸವ, ಗಣೇಶ ಚೌತಿ, ಅನಂತನ ಚತುರ್ದಶಿ ಹೀಗೆ ಒಂದಿಲ್ಲೊಂದು ವ್ರತ. ಉತ್ಸವಾಚರಣೆಗಳು ಆ ಮನೆಯಲ್ಲಿ ನಡೆಯುತ್ತಲೇ ಇರುತ್ತಿದ್ದವು. ಊರಿನ ಜನರೆಲ್ಲಾ ಸೇರಿ ಸಂಭ್ರಮವೋ ಸಂಭ್ರಮ ಆ ಮನೆಯಲ್ಲಿ ಸಾಮಾನ್ಯವಾಗಿತ್ತು. ಹಾಗೆಯೇ ಆಗಿನ ಕಾಲಕ್ಕೆ ಚಂದ್ರಶೇಖರಯ್ಯ ಗೋಕರ್ಣ, ಕಾಶಿ, ರಾಮೇಶ್ವರ, ಹರಿದ್ವಾರ, ಹೃಷಿಕೇಶ ತೀರ್ಥಕ್ಷೇತ್ರಗಳ ಪ್ರವಾಸಕ್ಕೂ ಪ್ರಸಿದ್ಧಿಯಾಗಿದ್ದರು. ಹಾಗೆ ಹೋದಾಗಲೆಲ್ಲಾ ಒಂದೊಂದು ಪುಣ್ಯಕ್ಷೇತ್ರದಲ್ಲೂ ಒಂದೊಂದು ವಿಗ್ರಹಮೂರ್ತಿ ಕೊಂಡು ತರುವುದು ಅವರ ಪದ್ಧತಿ. ತಂದ ವಿಗ್ರಹಗಳು ಸಾಲಿಗ್ರಾಮಗಳನ್ನು ಮನೆಯ ದೇವರ ಮಂಟಪದಲ್ಲಿ ಇಟ್ಟು ನಿತ್ಯ ಪೂಜೆ ಸಲ್ಲುತ್ತಿತ್ತು. ಹಲವು ವರ್ಷಗಳವರೆಗೆ ಪೂಜೆ ಸಾಂಗವಾಗಿಯೇ ಸಾಗಿತೆನ್ನಬೇಕು. ಮಗನ ಕಾಲಕ್ಕೆ ಮಾತ್ರ ವಾತಾವರಣ ಬದಲಾಯಿತು. ನಿಧಾನವಾಗಿ ನವರಾತ್ರಿ, ಗಣೇಶೋತ್ಸವಗಳೆಲ್ಲಾ ನಿಂತು ಹೋದವು. ಚಂದ್ರಶೇಖರಯ್ಯನ ಮಗ ಗುರುಮೂರ್ತಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಬ್ಯಾಂಕ್ ಮ್ಯಾನೇಜರ ಆದ.

ಮಗ ಬ್ಯಾಂಕ್ ಮ್ಯಾನೇಜರ ಆದ ಸಂತೋಷ ತಂದೆಗೆ ಹೆಚ್ಚು ಕಾಲ ಉಳಿಯಲಿಲ್ಲ. ಮಗ ಗುರುಮೂರ್ತಿ ಪ್ರಮೋಷನ್ ಮೇಲೆ ಪ್ರಮೋಷನ್ ಆಗಿ ಬೇರೆ ಬೇರೆ ರಾಜ್ಯಗಳಲ್ಲಿ ವೃತ್ತಿ ಮಾಡಬೇಕಾಗಿ ಮನೆಯಿಂದ ದೂರವೇ ಆಗಿಬಿಟ್ಟ. ಜೊತೆಗೆ ಬ್ಯಾಂಕ್‌ನಲ್ಲೇ ಇದ್ದ ಬೇರೆ ಜಾತಿಯವಳೊಬ್ಬಳನ್ನು ಮದುವೆಯಾದ ಮೇಲಂತೂ ಮನೆಯ ಸಂಪರ್ಕವೇ ಕಡಿದುಹೋದಂತಾಯಿತು. ಎಲ್ಲೋ ರಜಕ್ಕೆಂದು ಮನೆಗೆ ಬಂದಾಗ ಅವರನ್ನು ಸತ್ಕರಿಸುವುದರಲ್ಲೇ ಕುಟುಂಬದವರು ಹೈರಾಣವಾಗುತ್ತಿದ್ದರು. ಇದ್ದೊಬ್ಬ ಮಗ ಮನೆಗೆ ಬರುವುದೇ ಅಪರೂಪವಾದ ನೋವು ಚಂದ್ರಶೇಖರಯ್ಯನವರನ್ನು ಕಾಡಿದರೆ, ಬಂದಾಗಲಾದರೂ ದೇವರಕೋಣೆ ಕಡೆ ಮುಖ ಹಾಕುವುದಿಲ್ಲವೆನ್ನುವುದು ಇನ್ನಷ್ಟು ನೋವಿನ ಸಂಗತಿಯಾಗಿತ್ತು. ಇವೆಲ್ಲಕ್ಕಿಂತ ಸೊಸೆ ನಾಗವೇಣಿ ಮೀನು ಮಾಂಸ ತಿನ್ನುವ ಜಾತಿಯವಳೆನ್ನುವುದು ಅವರಿಗೆ ಹೆಚ್ಚು ಆಘಾತಕರ ಸಂಗತಿಯಾಗಿತ್ತು. ಮಗ ಸೊಸೆ ದೇವರ ಪೂಜೆ ಮಾಡುತ್ತೇನೆಂದರೂ ಬೇಡ ಎನ್ನಬೇಕಾಯಿತು. ತಾವು ಪಾಲಿಸಿಕೊಂಡು ಬಂದ ಮಡಿ ಮೈಲಿಗೆ, ವ್ರತ, ಎಲ್ಲಕ್ಕೂ ತಿಲಾಂಜಲಿ ಹಾಕಬೇಕಾದ ಪರಿಸ್ಥಿತಿ. ಏನೂ ಮಾಡುವಂತಿಲ್ಲ. ಇದ್ದ ಒಬ್ಬ ಮಗನೊಂದಿಗೆ ಜಗಳವಾಡಲಾಗುತ್ತದೆಯೇ?

ತಾವು ಇನ್ನು ಎಷ್ಟು ಕಾಲ ಬದುಕಬಹುದು. ಕೊನೆಗೆ ಎಲ್ಲಾ ಅವನದೇ ತಾನೇ? ನಿವೃತ್ತನಾದ ಅನಂತರ ಮನೆಗೇನೋ ಮಗ ಬರಬಹುದು. ತೋಟದ ಕೃಷಿಯನ್ನೂ ಜನಗಳಿಂದ ಮಾಡಿಸಬಹುದು. ಆದರೆ, ಈ ದೇವರುಗಳ ಗತಿ? ಯಾರು ಮುಂದೆ ಪೂಜೆ ಮಾಡುವವರು? ಅದೇ ಚಿಂತೆ ಚಂದ್ರಶೇಖರಯ್ಯನವರನ್ನು ಇನ್ನಿಲ್ಲದಂತೆ ಕಾಡಿತು.

ಗೋಕರ್ಣದ ರಾಮ ಭಟ್ಟರು ಸಂಭಾವನೆಗೆಂದು ಯಾವಾಗಲೂ ಬರುವವರು. ಈ ಸಾರಿ ಬಂದಾಗ ಅವರಲ್ಲಿ ಸಮಯ ನೋಡಿ ವಿಷಯ ಪ್ರಸ್ತಾಪಿಸಿ ಪರಿಹಾರ ಕೇಳಿದರು. ತುಂಬಾ ಆಲೋಚಿಸಿದ ಭಟ್ಟರು ಪರಿಹಾರಕ್ರಮ ಸೂಚಿಸಿದರು.

ಒಂದೊಂದಾಗಿ ಎಲ್ಲಾ ವ್ರತಾಚರಣೆಗಳನ್ನು ಮೊದಲು ನಿಲಿಕೆ ಮಾಡುವುದು. ಹತ್ತಿರದಲ್ಲೇ ಇರುವ ಈಶ್ವರ ದೇವಸ್ಥಾನಕ್ಕೆ ಪೂಜೆಗೆಂದು ಒಬ್ಬರನ್ನು ನೇಮಿಸುವುದು. ಪೂಜೆ ಮಾಡುವವರಿಗೆಂದು ಒಂದಿಷ್ಟು ತೋಟ ಬರೆದುಕೊಡುವುದು.

ಸರಿ, ಚಂದ್ರಶೇಖರಯ್ಯನವರು ತಡ ಮಾಡಲಿಲ್ಲ. ಈಶ್ವರ ದೇವಸ್ಥಾನಕ್ಕೆ ಕೃಷ್ಣ ಭಟ್ಟರನ್ನು ಪೂಜೆಗೆಂದು ನೇಮಿಸಿದರು. ತಮ್ಮ ಒಂದು ಎಕರೆ ತೋಟ ಬರೆದುಕೊಟ್ಟರು. ಮಾಡುತ್ತಿದ್ದ ಎಲ್ಲ